— ೧ —

ಯುಗ ಪ್ರೆಸ್, ಉಡುಪಿ.

0—2—0

ಎರಡು ಮಾತು

ಪಶ್ಚಿಮಾಭಿಮುಖನಾಗಿ ನಿಂತಿರುವ ಉಡುಪಿಯ ಶ್ರೀ ಕೃಷ್ಣನೇ ಕನಕದಾಸ
ಭಕ್ತಿಯ ಔನ್ನತ್ಯಕ್ಕೆ ಪ್ರತ್ಯಕ್ಷ ನಿದರ್ಶನನಾಗಿರುವಾಗ, ಅವರ "ಹರಿಭಕ್ತಿಸಾರ" ಎಷ್ಟು
ಅಮೂಲ್ಯವಾದ ಕೃತಿ ಎಂಬ ಕುರಿತು ನಾವೇನೂ ವಿವರಿಸಿ ಬರೆಯುವ ಆಗತ್ಯವಿಲ್ಲ
"ಮುಕ್ತಿಗೆ ಭಕ್ತಿಯೇ ಕಾರಣವು" ಎಂದು ಸಾರುತ್ತಾ ಕನಕದಾಸರು ತಮ್ಮ ಈ ಕಾವ್ಯದಲ್ಲಿ
ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿದ್ದಾರೆ
"ನಮ್ಮನ್ನು ಅನವರತ ರಕ್ಷಿಸು" ಎಂಬ ಪಲ್ಲವಿಯೊಂದಿಗೆ ಆಧ್ಯಾತ್ಮಿಕ ಪ್ರಪಂಚದ ನಿಗೂಢ
ರಹಸ್ಯಗಳ ಮೇಲೆ ವಿಶೇಷವಾದ ಬೆಳಕು ಚೆಲ್ಲಿ, ಹರಿನಾಮವು ವಿಷಯ ಲಾಲಸೆಯನ್ನು
ಹೂಳಿ ಬಿಡುವ ಕೌತುಕವನ್ನು ನಮ್ಮ ಮುಂದೆ ಮನದಟ್ಟಾಗುವಂತೆ ಮಂಡಿಸಿದ್ದಾರೆ.

ಆಧಿಭೌತಿಕ ವಿಷಯಗಳನ್ನು ಕುರಿತಾದ ಒಲವೇ ಪ್ರಬಲಿಸಿರುವ ಈ ಕಾಲದಲ್ಲಿ ಹ
ನಾಮ ಜಪದಿಂದ ಲಾಭವೇನೆಂದು ಅನೇಕ ಜನರು ಶಂಕಿಸುವುದುಂಟು. ಅವರೆಲ್ಲರೂ
ನಮ್ಮ ಕಾಲದಲ್ಲಿಯೇ ಆಗಿ ಹೋದ ಮಹಾತ್ಮಾ ಗಾಂಧೀಜಿಯ ಲೇಖನಗಳನ್ನು ಓದಿದ ಪ
ದಲ್ಲಿ ಭಗವನ್ನಾಮ ಸ್ಮರಣೆಯ ಮಹಾತ್ಮೆಯು ಎಷ್ಟು ಅಗಾಧವಾಗಿದೆ ಎಂಬ ಸಂಗತಿ ಮ
ನರಿಕೆಯಾಗದಿರದು. ವ್ಯಕ್ತಿಗತ ಸ್ವಾತಂತ್ರ್ಯ ರಕ್ಷಣೆಯಲ್ಲಿ ಪರಮಾತ್ಮನ ಪರಿಶುದ್ಧ ನಾಮವನ್ನು
ಸ್ಮರಿಸುವುದರಿಂದ ಹೆಚ್ಚಿನ ನೆರವು ಸಿಗುವುದೆಂದೂ ದೇಹಕ್ಕೆ ಹಸಿವು ಎಷ್ಟು ನೈಸರ್ಗಿಕವೋ
ಅಷ್ಟೇ ಮನಸ್ಸಿಗೆ ಪ್ರಾರ್ಥನೆಯು ಸಹಜವಾದುದೆಂದೂ ಭಗವನ್ನಾಮ ಸ್ಮರಣೆಯ ಹೊರತ
ಆತ್ಮ ಶಾಂತಿ ಪ್ರಾಪ್ತವಾಗದೆಂದೂ ಗಾಂಧೀಜಿ ಹೇಳುತ್ತಿದ್ದರು.

ಭಗವಂತನ ಒಳ್ಳೆಯ ಗುಣಗಳನ್ನೆ ಕುರಿತು ನಿರಂತರ ಚಿಂತಿಸುವುದರಿಂದ ನಮ
ಮನಸ್ಸಿನಲ್ಲೂ ಸದ್ಭಾವನೆಗಳು ಜಾಗೃತಗೊಳ್ಳುತ್ತವೆ. ದೇವರ ಭಯವೇ ಜ್ಞಾನದ ಆರಂ
ವೆಂಬ ಮಾತನ್ನು ನೆನೆದರೆ ಭಕ್ತಿಯ ತೀವ್ರತೆ ಹೆಚ್ಚಿದಂತೆ ಹಿಂದಿನ ತಪ್ಪುಗಳಿಂದ ಘಟಿಸಿ
ಆಧಿವ್ಯಾಧಿಗಳೂ ದೂರಾಗಬಲ್ಲನೆಂಬ ವಿಶ್ವಾಸ ಬಲವಾಗುತ್ತದೆ. ಭವರೋಗ ವಿನಾಶಕ
ವೆಂದು ಭಗವನ್ನಾಮವನ್ನು ಕರೆಯುವುದರ ರಹಸ್ಯವೇ ಇದು. ನಾವು ಕನಕದಾಸರ ಈ ಕೃ
ಯನ್ನು ಮುದ್ರಿಸಿ ಪ್ರಕಟಿಸುವಲ್ಲಿ ಜನರು ಹೀಗೆ ಪ್ರಯೋಜನಹೊಂದಲೆಂಬ ಧ್ಯೇಯವನ್ನಿ
ಟ್ಟುಕೊಂಡಿದ್ದೇವೆ. ಸರ್ವರ ಶ್ರೇಯೋಕಾಂಕ್ಷಿಗಳಾಗಿಯೂ ಪ್ರಚಾರಾರ್ಥವಾಗಿಯೂ
ಪರಮಾತ್ಮನ ಪ್ರೀತ್ಯರ್ಥವಾಗಿಯೂ ಇದನ್ನು ಕನ್ನಡಿಗರಿಗೆ ಒದಗಿಸುವ ಪ್ರಯತ್ನ ಮಾಡಿ
ದ್ದೇವೆ. ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ
ಸತ್ಕಾರ್ಯಗಳಲ್ಲಿಯೇ ತತ್ಪರರಾಗುವಂತೆ ಮಾಡುವ ಈ ಹರಿಭಕ್ತಿಸಾರವು ಕನ್ನಡಿಗರ ನಿತ್ಯ
ಸಂಗಾತಿಯಾದರೆ ನಾವು ಧನ್ಯರು!

ಉಡುಪಿ
೧೦—೧೨—೧೯೫೪

—ಪ್ರಕಾಶಕರು.

॥ ಶ್ರೀ ॥

ಕನಕದಾಸ ವಿರಚಿತ.

ಶ್ರೀ ಹರಿಭಕ್ತಿಸಾರ.

(ಭಾಮಿನಿ ಷಟ್ಪದಿ)

ಶ್ರೀಯರಸ ಗಾಂಗೇಯನುತ ಕೌಂ | ತೇಯವಂದಿತ ಚರಣಕಮಲಧ | ಳಾಯತಾಂಬಕ ರೂಪಚಿನ್ಮಯ ದೇವಕೀತನಯಾ || ರಾಯ ರಘುಕುಲವರ್ಯ ಭೂಸುರ | ಪ್ರಿಯ ಸುರಪುರನಿಲಯ ಚೆನ್ನಿಗ | ರಾಯಚತುರೋಪಾಯ ರಕ್ಷಿಸು ನಮ್ಮನನವರತಾ ॥ ೧ ॥

ದೇವದೇವ ಜಗದ್ಭರಿತ ವಸು | ದೇವಸುತ ಜಗದೇಕನಾಥರ | ನಾವಿ ನೋದಿತ ಸಜ್ಜನಾತನ ನಿಖಿಲಗುಣಭರಿತ || ಭಾವಜಾರಿಪ್ರಿಯ ನಿರಾಮಯ ರಾವಣಾಂತಕ ರಘುಕುಲಾನ್ವಯ|ದೇವ ಅಸುರವಿರೋಧಿರಕ್ಷಿಸು ನಮ್ಮನನವರತಾ|| ॥ ೨ ॥

ಅನುಪಮಿತಚಾರಿತ್ರ ಕರುಣಾ|ವನಧಿ ಭಕ್ತಕುಟುಂಬಿಯೋಗೀ|ಜನ ಹೃದಯ ಪರಿಪೂರ್ಣ ನಿತ್ಯಾನಂದ ನಿಗಮನುತ || ವನಜನಾಭ ಮುಕುಂದ ಮುರಮ | ರ್ದನ ಜನಾರ್ದನ ತ್ರೈಜಗತ್ಪ್ರ | ವನ ಸುರಾರ್ಚಿತದೇವ ರಕ್ಷಿಸು ನಮ್ಮನನವರತಾ||೩||

ಕಮಲಸಂಭವವಿನುತ ವಾಸವ । ನಮಿತ ಮಂಗಳಚರಿತದುರಿತ | ಕ್ಷಮಿತ ರಾಘವ ವಿಶ್ವಪೂಜಿತ ವಿಶ್ವವಿಶ್ವಮಯಾ || ಅಮಿತವಿಕ್ರಮಭೀಮ ಸೀತಾ | ರಮಣ ವಾಸುಕಿಶಯನ ಖಗಪತಿ | ಗಮನ ಕಂಜಜನಯ್ಯ ರಕ್ಷಿಸು ನಮ್ಮನನವರತಾ ॥ ೪ ॥

ಕ್ಷೀರವಾರಿಧಿಶಯನ ಶಾಂತಾ | ಕಾರ ವಿವಿಧವಿಚಾರ ಗೋಪೀ | ಜಾರ ನವನಿತಚೋರ ಚಕ್ರಧಾರ ಭವದೂರಾ||ಮಾರಪಿತ ಗುಣಹಾರ ಸರಸಾ|ಕಾರ ರಿಪುಸಂಹಾರ ತುಂಬುರು | ನಾರದಪ್ರಿಯವರದ ರಕಿಸು ನಮ್ಮನನವರತಾ ॥ ೫ ॥

ತಾಮರಸದಳನಯನ ಭಾರ್ಗವ | ರಾಮ ಹಲಧರರಾಮ ದಶರಥ | ರಾ
ಮೇಘಶ್ಯಾಮ ಸದ್ಗುಣಧಾಮ ನಿಸ್ಸೀಮ ॥ ಸಾಮಗಾನ ಪ್ರೇಮಕಾಂಚನ | ದಾ
ಧರ ಸುತ್ರಾಮ ವಿರಚಿತ|ಕಾಮ ರವಿಕುಲಸೋಮ ರಕ್ಷಿಸು ನಮ್ಮನನವರತಾ |

ವೇದಗೋಚರ ವೇಣುನಾದವಿ । ನೋದ ಮಂದರ ಶೈಲಧರ ಮಧು |ಸ
ನಾಚ್ಯುತ ಕಂಸದಾನವರಿಪು ಮಹಾಮಹಿಮಾ ॥ ಯಾದವೇಂದ್ರ ಯಶೋಧೆನಂ
ನಾದಬಿಂದುಕಳಾತಿಶಯ ಪ್ರ । ಹ್ಲಾದರಕ್ಷಕ ವರದ ರಕ್ಷಿಸು ನಮ್ಮನನವರತಾ |

ಅಕ್ಷಯಾಶ್ರಿತ ಸುಜನಜನಸಂ | ರಕ್ಷಕ ಶ್ರೀ ವತ್ಸ ಕೌಸ್ತುಭ | ಮೋ
ದಾಯಕ ಕುಟಿಲದಾನವಶಿಕ್ಷ ಕುಮುದಾಕ್ಷಾ||ಪಕ್ಷಿವಾಹನ ದೇವಸಂಕುಲ|ಪಕ್ಷ
ದಾಧ್ಯಕ್ಷವರನಿಟ । ಲಾಕ್ಷಸಖ ಸರ್ವೇಶ ರಕ್ಷಿಸು ನಮ್ಮನನವರತಾ ||

ಚಿತ್ರಕೂಟನಿವಾಸ ವಿಶ್ವಾ | ಮಿತ್ರಕೃತುಸಂರಕ್ಷ ರವಿಶಶಿ । ನೇತ್ರ ಭವ್ಯಚ
ಸದ್ಗುಣಗಾತ್ರ ಸತ್ಪಾತ್ರಾ || ಧಾತ್ರಿಜಾಂತಕ ಕಪಟನಾಟಕ | ಸೂತ್ರ ಪರಮಪ
ಫಲ್ಗುಣ | ಮಿತ್ರವಾಕ್ಯವಿಚಿತ್ರ ರಕ್ಷಿಸು ನಮ್ಮನನವರತಾ ||

ಮಂಗಳಾತ್ಮಕ ದುರಿತ ತಿಮಿರಪ | ತಂಗ ಗರುಡತುರಂಗ ರಿಪುಮದ | ಭ
ಕೀರ್ತಿತರಂಗ ಪುರಹರಸಂಗ ನೀಲಾಂಗ || ಅಂಗದಪ್ರಿಯನಂಗಪಿತ ಕಾ । ಳ
ಮರ್ದನ ಅಮಿತಕರುಣಾ | ಪಾಂಗ ಶ್ರೀನರಸಿಂಗ ರಕ್ಷಿಸು ನಮ್ಮನನವರತಾ||

ದಾಶರಥಿ ವೈಕುಂಠ ನಗರ ನಿ । ವಾಸ ತ್ರೈಜಗದೀಶ ಪಾಪವಿ | ನಾಶ ಪ
ವಿಲಾಸ ಹರಿ ಸರ್ವೇಶ ದೇವೇಶಾ || ವಾಸುದೇವ ದಿನೇಶತಸಂ | ಕಾಶ ಯದುಕ
ವಂಶ ತಿಲಕ ಪ । ರಾಶರಾನುತ ದೇವ ರಕ್ಷಿಸು ನಮ್ಮನನವರತಾ ||

ಕುಂದಕುಟ್ಮಲರದನ ಪರಮಾ । ನಂದ ಹರಿಗೋವಿಂದ ಸನಕಸ । ನ
ವಂದಿತ ಸಿಂಧುಬಂಧನ ಮಂದರಾದ್ರಿಧರಾ ॥ ಇಂದಿರಾಪತಿ ವಿಜಯಸುಖ ಅ
ವಿಂದನಾಭ ಪುರಂದರಾರ್ಚಿತ | ನಂದಕಂದ ಮುಕುಂದ ರಕ್ಷಿಸು ನ
ನನವರತಾ ||

ಬಾಣಬಾಹುಚ್ಛೇದ ರಾವಣ | ಪ್ರಾಣನಾಶನ ಪುಣ್ಯನಾಮ ಪು|ರಾಣ ಪುರುಷೋತ್ತಮನಿಪುಣಅಣುರೇಣುಪರಿಪೂರ್ಣ ಕ್ಷೋಣಿಪತಿ ಸುಲಲಿತ ಸುದರ್ಶನ | ಪಾಣಿ ಪಾಂಡವರಾಜಕಾರ್ಯಧು | ರೀಣ ಜಗನಿರ್ವಾಣ ರಕ್ಷಿಸು ನಮ್ಮ ನನವರತಾ || ೧೩ ||

ನೀಲವರ್ಣ ವಿಶಾಲಶುಭಗುಣ | ಶೀಲ ಮುನಿಕುಲಪಾಲ ಲಕ್ಷ್ಮೀ ಲೋಲ ರಿಪು ಶಿಶುಪಾಲಮಸ್ತಕಶೂಲ ವನಮಾಲಾ ॥ ಮೂಲಕಾರಣ ವಿಮಲ ಯಾದವ | ಜಾಲ ಹಿತ ಗೋಪಾಲ ಅಗಣಿತ|ಲೀಲ ಕೋಮಲಕಾಯ ರಕ್ಷಿಸು ನಮ್ಮನನವರತಾ ॥೧೪॥

ನಾಗನಗರಿ ಧರಿತ್ರಿಕೋಶವಿ | ಭಾಗತಂತ್ರ ನಿಯೋಗಗಮನ ಸ | ರಾಗ ಪಾಂಡವರಾಜ ಜಿತ ಸಂಗ್ರಾಮ ನಿಸ್ಸೀಮಾ ॥ ಯೋಗಗಮ್ಯ ಭವಾಬ್ಧಿ ವಿಷಧರ | ನಾಗಗಾರುಡಮಂತ್ರವಿದ ಭವ | ರೋಗವೈದ್ಯ ವಿಚಿತ್ರ ರಕ್ಷಿಸುನಮ್ಮನನವರತಾ || ೧೫ ||

ಶ್ರೀಮದುತ್ಸಹ ದೇವನುತ ಶ್ರೀ | ರಾಮ ನಿನ್ನ ಚರಣಸೇವಕ | ಪ್ರೇಮದಿಂ ಸಾಷ್ಟಾಂಗವೆರಗಿಯೆ ಮಾಳ್ಪೆಬಿನ್ನಪವಾ || ಈ ಮಹಿಯೊಳೀವರೆಗೆ ನಾವ್ ಸು ಕ್ಷೇಮಿಗಳು ನಿನ್ನಯ ಪದಾಬ್ಜ | ಕ್ಷೇಮವಾರ್ತೆಯನರುಹಿ ರಕ್ಷಿಸುನಮ್ಮನನವರತಾ ॥ ೧೬ ॥

ಈಗಲೀ ಮರ್ಯಾದೆಯಲಿ ಶರ | ಣಾಗತರ ಸೇವೆಯೊಳು ಹೊಂಪುಳಿಯಾಗಿ ಬಾಳುವರೇನು ಧನ್ಯರೊ ಹರ ಮಹಾದೇವಾ ॥ ಭೋಗ ಭಾಗ್ಯವ ಬಯಸಿ ಮುಕ್ತಿಯ | ನೀಗಿ ನಿಮ್ಮನು ಭಜಿಸಲರಿಯದ | ಯೋಗಿಗಳ ಮಾತೇನು ರಕ್ಷಿಸು ನಮ್ಮ ನನವರತಾ || ೧೭ ||

ಭಕ್ತಿಸಾರದ ಚರಿತೆಯನ್ನು ಹರಿ|ಭಕ್ತರಾಲಿಸುವಂತೆ ರಚಿಸುವೆ|ಯುಕ್ತಿಯಲಿ ಬರದೋದಿದವರಿಷ್ಟಾರ್ಥಸಿದ್ಧಿಪುದೂ ॥ ಮುಕ್ತಿಗಿದು ನೆಲೆದೋರುವುದು ಹರಿ | ಭಕ್ತರನು ಲಾಲಿಪುದು ನಿಜಮತಿ|ಭಕ್ತಗೊಲಿವಂದದಲಿ ರಕ್ಷಿಸು ನಮ್ಮನನವರತಾ ॥೧೮॥

ನಳಿನಲೋಚನ ನಿನ್ನ ಮೂರ್ತಿಯ | ಕಳೆ ಬೆಳಗುತಿದೆ ಲಹರಿಯಲಿ ಭೂ | ತಳದೊಳರಿಚ್ಚರಿಯಾದ ನಾಮಾಮೃತ ಸಮುದ್ರದಲೀ||ಬಳಸುವರು ಸತ್ಕವಿಗಳವರ| ಗ್ಗಳಿಕೆ ಎನಗಿನಿತಿಲ್ಲ ಸನ್ಮತಿ | ಗಳಿಗೆ ಮಂಗಳವಿತ್ತು ರಕ್ಷಿಸು ನಮ್ಮ ನನವರತಾ ||೧೯||

ಗಿಳಿಯ ಮರಿಯನು ತಂದು ಪಂಜರ|ದೊಳಗೆ ಪೋಶಿಸಿ ಕಲಿಸಿ ಮೃದುನು
ಗಳನು ಲಾಲಿಸಿ ಕೇಳ್ವ ಪರಿಣತರಂತೆ ನೀನೆನಗೆ ॥ ತಿಳುಹು ಮತಿಯನು ಯ
ಜಿಹ್ವೆಗೆ | ವೊಳಗುವಂತದಿ ನಿನ್ನನಾಮಾ | ವಳಿಯ ಪೊಗಳಿಕೆಯಿತ್ತು ರಕ್ಷಿ
ನಮ್ಮ ನನವರತಾ ॥

ಪೊಗಳಲಳವೇ ನಿನ್ನ ನಾಮವ | ಸುಗುಣ ಸಚ್ಚಾರಿತ್ರ ಕಥನವ | ನ
ತೋಪಮಮಿತವಿಕ್ರಮಗಮ್ಯ ನೀನೆಂದೂ ॥ ನಿಗಮತತಿ ಕೈವಾರಿಸುತ ಪದ|ಯ
ವಕಾಣದೆ ಬಳಲುತಿದೆ ವಾ|ಸುಕಿಶಯನ ಸರ್ವೇಶ ರಕ್ಷಿಸು ನಮ್ಮನನವರತಾ ॥

ವೇದಶಾಸ್ತ್ರಪುರಾಣ ಪುಣ್ಯದ | ಹಾದಿಯನು ನಾನರಿಯೆ ತರ್ಕದ । ವಾದ
ಗುರುಹಿರಿಯರರಿಯದ ಮೂಢಮತಿಯೆನಗೆ || ಆದಿಮೂರುತಿನೀನು ನೆರೆ ಕ
ಣೋದಯನು ಹೃದಯಾಂಗಣದಿ ಜ್ಞಾ | ನೋದಯವನೆನಗಿತ್ತು ರಕ್ಷಿಸು ನ
ನನವರತಾ ||

ಹಸಿವರಿತು ತಾಯ್ತನ್ನ ಶಿಶುವಿಗೆ | ಒಸೆದು ಮೊಲೆಕೊಡುವಂತೆ ನೀ ಪೊ
ಶಿಸದೆ ಬೇರಿನ್ನಾರು ಪೋಷಕರಾಗಿ ಸಲಹುವರೂ || ಬಸುರೊಳಗೆ ಬ್ರಹ್ಮಾ
ಕೋಟಿಯ | ಪಸರಿಸಿದ ಪರಮಾತ್ಮನೀನೆಂ | ದುಸುರುತಿವೆ ವೇದಗಳು ರಕ್ಷಿ
ನಮ್ಮನನವರತಾ ||

ಇಬ್ಬರಣುಗರು ನಿನಗೆ ಅವರೊಳ | ಗೊಬ್ಬಮಗನೀರೇಳು ಲೋಕ
ಹೆಬ್ಬೆಳಸು ಬೆಳೆವಂತೆ ಕಾರಣ ಕರ್ತನಾದವನೂ||ಒಬ್ಬ ಮಗನದ ಬರೆವಕರಣ
ರಿಬ್ಬರೀಲೋಕಪ್ರಸಿದ್ಧರು | ಅಬ್ಬಿಸಿದೆ ಪ್ರಾಣಿಗಳ ರಕ್ಷಿಸು ನಮ್ಮನನವರತಾ||

ಸಿರಿಯುಕುಲಸತಿ, ಸುತನುಕಮಲಜ | ಹಿರಿಯಸೊಸೆ ಶಾರದೆ, ಸಹೋ
ಗಿರಿಜೆ, ಮೈದುನಶಂಕರನು ಸುರರೆಲ್ಲ ಕಿಂಕರರೂ || ನಿರುತ ವಾಯೆಯು
ನಿಜಮಂ | ದಿರವಜಾಂಡವು ಜಂಗಮಸ್ಥಾ | ವರಕುಟುಂಬಿಗ ನೀನು ರಕ್ಷಿ
ನಮ್ಮನನವರತಾ ||

ಸಾಗರನ ಮಗಳರಿಯದಂತೆ ಸ | ರಾಗದಲಿ ಸಂಚರಿಸುತಿಹ ಉ | ದೊ
ವೇನು ನಿಮಿತ್ತ ಕಾರಣವಿಲ್ಲ ಲೋಕದಲೀ || ಭಾಗವತರಾದವರ ಸಲಹುವ |
ಸಂಚರಿಸುವುದು ಈ ಭವ|ಸಾಗರದಿ ಮುಳುಗಿಸದೆ ರಕ್ಷಿಸು ನಮ್ಮನನವರತಾ||

ಹಸ್ತಿವಾಹನನಾದಿಯಾದ ಸ | ಮಸ್ತ ದೇವನಿಕಾಯದೊಳಗೆ ಸ
ಶಕ್ತನಾವನು ನಿನ್ನಪೋಲ್ ಶರಣಾಗತರ ಪೊರೆವಾ || ಹಸ್ತ ಕಲಿತ ಸುದ

ಮೊಳರಿ | ಮಸ್ತಕವನಿಳುಹುವ ಪರಾಪರ | ವಸ್ತುವಲ್ಲವೆ ನೀನು ರಕ್ಷಿಸು ನಮ್ಮ ನನವರತಾ ||೨೭||

ಹಗೆಯುವರಿಗೆ ವರವೀವರಿಬ್ಬರು|ತೆಗೆಯಲರಿಯರು ಕೊಟ್ಟ ವರಗಳ | ತೆಗೆದು ಕೊಡುವ ಸಮರ್ಥರಾರೀಜಗಕೆ ನಿನ್ನಂತೆ || ಸುಗುಣರಿನ್ನಾರುಂಟು ಕದನವ | ಬಗೆದು ನಿನ್ನೊಳು ಜಯಿಸುವವ ರೀ | ಜಗದೊಳುಂಟೇ ದೇವ ರಕ್ಷಿಸು ನಮ್ಮನನ ವರತಾ ||೨೮||

ಸುಮನಸರ ವೈರದಲಿಕೆಲಬರು | ಕುಮತಿಗಳು ತಪದಿಂದ ಭರ್ಗನ | ಕಮಲ ಜನ ಪದಯುಗವ ಮೆಚ್ಚಿಸಿವರವ ಪಡೆದಿಹರು||ಸಮರ ಮುಖದೊಳಗುಪಮೆಯುಲಿ ವಿ | ಕ್ರಮದಿ ವೈರವಮಾಡಿದವರಿಗೆ | ಅಮರಪದವಿಯನಿತ್ತೆ ರಕ್ಷಿಸುನಮ್ಮನನ ವರತಾ ||೨೯||

ಬಲಿಯುಬಂದಿಸಿ ಮೊರೆಯಿಡುವ ಸತಿ | ಗೊಲಿದು ಅಕ್ಷಯವಿತ್ತು ಕರುಣದಿ| ಮೊಲೆಯನುಣಿಸಿದ ಬಾಲಕಿಯ ಪಿಡಿದಸುವನಪಹರಿಸಿ || ಶಿಲೆಯ ಸತಿಯನು ಮಾಡಿ ತ್ರಿಪುರದ | ಲಲನೆಯರ ವ್ರತಗೆಡಿಸಿ ಕೂಡಿದ | ಕೆಲಸವೃತ್ತಮವಾಯ್ತು ರಕ್ಷಿಸು ನಮ್ಮನನವರತಾ ||೩೦||

ಕರಿಯು ಕಾಯ್ದಾ ಜಲಧಿ ಮಕರಿಯ | ತರಿದು ಹಿರಣ್ಯಾಕ್ಷಕನ ಸೀಳ್ದಾ | ತರಳನನು ತಲೆಗಾಯ್ದು ಶಕಟಾಸುರನ ಹತಮಾಡೀ ॥ ದುರುಳ ಕಂಸನ ಕೊಂದು ಮಗಧನ | ಮುರಿದು ವತ್ಸನ ಹಮ್ಮಳಿಸಿ ಖರ | ಹರಣವನು ಹಿಂಗಿಸಿದೆ ರಕ್ಷಿಸು ನಮ್ಮನನವರತಾ ||೩೧||

ಶಿಶುತನದ ಸಾಮರ್ಥ್ಯದಲಿ ಕೆಲ | ರಸುರರನು ಸಂಹರಿಸಿ ಚಕ್ರವ | ಬಿಸುಟು ಯೌವನಕಾಲದಲಿಯಾಪಾಂಡುಸುತರಿಂದ ॥ ವಸುಮತಿಯ ಭಾರವನಿಳುಹಿ ಸಾ | ಹಸದಿ ಮೆರೆದವನಾಗಿ ನೀ ಮೆ | ಚ್ಚಿಸಿದೆ ತ್ರಿಜಗವನೆಲ್ಲ ರಕ್ಷಿಸು ನಮ್ಮನನವರತಾ ||೩೨||

ಎಲ್ಲರಲಿ ನೀನಾಗಿ ಸಮನಸ | ರಲ್ಲಿ ಅತಿಹಿತನಾಗಿ ಯಾದವ | ರಲ್ಲಿ ಬಾಂಧವನಾಗಿ ದಾನವರಲ್ಲಿ ಹಗೆಯಾಗಿ ॥ ಕೊಲ್ಲಿಸಿದೆ ಭೀಮಾರ್ಜುನರ ಕೈ | ಯಲ್ಲಿ ಕೌರವ ಕುಲವನ್ನೆಲ್ಲವ | ಬಲ್ಲಿದನು ನೀನಹುದು ರಕ್ಷಿಸು ನಮ್ಮನನವರತಾ ||೩೩||

ನರಗೆ ಸಾರಥಿಯಾಗಿ ರಣದೊಳು | ತುರುಗನೀರಡಿಸಿದರೆ ವಾರಿಯ | ಸರಸಿಯನು ನಿರ್ಮಿಸಿ ಕಿರೀಟಿಯ ಕೈಯ ಸೈಂಧವನ || ಶಿರವ ಕೆಡಹಿಸಿ ಅವನ ತಂದೆಯ| ಕರತಳಕೆ ನೀಡಿಸಿದೆ|ಹರಹರ|ಪರಮಸಾಹಸಿ|ನೀನು ರಕ್ಷಿಸು ನಮ್ಮನನವರತಾ||೩೪||

ಬವರದಲಿ ಖತಿಗೊಂಡು ಗದೆಯೊಳು| ಕವಿದು ನಿನ್ನ ಶ್ರುತಾಯುಧನು
ಕ್ಕವಡಿಸಿ ಹೊಯ್ದಾಡಿ ತನ್ನಾಯುಧದಿ ತಾಮಡಿದ | ವಿವರವೇನೋ ತಿಳಿ
ಮಾ | ಯುವನು ನೀನೇ ಬಲ್ಲೆನಿನ್ನಾ | ಯುವನು ಬಲ್ಲವರುಂಟೆರಕ್ಷಿಸು ನಮ
ವರತಾ ||

ಇಳೆಗೆ ಪತಿಯಾದವನು ಯಾದವ | ರೊಳಗೆ ಬಾಂಧವ ನಿನಗೆ ಸೋದ
ಯನಾದಭಿಮನ್ಯುವನು ಕೊಲ್ಲಿಸಿದೆ ಕೊಳುಗುಳದೀ || ಅಳಲಿನಬುಧಿಯೊ
ತಂಗಿಯ | ಬಳಲಿಸಿದೆ ಕುಲಗೋತ್ರ ಬಾಂಧವ | ರೊಳಗೆ ಕೀರ್ತಿಯಪಡೆದೆರ
ನಮ್ಮನನವರತಾ ||

ತಾಯನಗಲಿದ ತನಯನಾರಾ | ಧೇಯನೊಳಗೆ ರಹಸ್ಯದಲಿ ಕುಲ | ದ
ವನು ನೆರೆ ತಿಳುಹಿ ಅರ್ಜುನನಿಂದ ಕೊಲ್ಲಿಸಿದೆ॥ಮಾಯ ಮಂತ್ರದ ಕುಟಿಲ ಗು
ನ್ಯಾಯವೋ ಇದುನ್ಯಾಯವೋ ನಿ | ನ್ನಾಯವನು ನೀ ಬಲ್ಲೆ ರಕ್ಷಿಸುನಮ
ವರತಾ ||

ಕೊಲ್ಲಬಲ್ಲವನಾಗಿ ನೀ ಹಗೆ| ಯಲ್ಲಿ ಸಖ್ಯವ ಬೆಳೆಸಲದು ಹಿತ |
ನಿನ್ನಯ ಗುಣವ ಬಲ್ಲನೇಳ್ಲ ಯದುಕುಲದೀ ॥ ಗೊಲ್ಲನಾರಿಯರೊಳು ಪ್ರವತ
ನಲ್ಲವೇ ಭಾವಿಸಲು ಲೋಕದೊ | ಳೆಲ್ಲರೂ ಸರಿ ನಿನಗೆ ರಕ್ಷಿಸುನಮ
ವರತಾ ||

ಮಗನ ಕೊಂದವನಾಳುಷ್ಪಂಥಾ|ಸುಗುಣೆಯರು ಹದಿನಾರು ಸಾವಿರ|ಸೊ
ಗಾತಿಯರವರ ಮೋಹದ ಬಲೆಗೆ ವಿಟನಾಗೀ || ಬಗೆಬಗೆಯ ರತಿಕಲೆಗಳಲಿ
ರುಗುರ ನಾಟಿಸಿ ಮೆರೆದು ನೀನೀ | ಜಗಕೆ ಪಾವನನಾದೆ ರಕ್ಷಿಸು ನಮ
ವರತಾ ||

ಏನು ಮಾಡಿದಡೇನು ಕರ್ಮವ | ನೀನೊಲಿಯದಿನ್ನಿಲ್ಲವಿದಕನು | ಮಾ
ಟೀ ಭ್ರಮರಕೀಟನ್ಯಾಯದಂದದಲಿ॥ನೀನೊಲಿಯೆ ತೃಣಪರ್ವತವು ಪುಸಿ | ಯ
ನೀ ಪತಿಕರಿಸೆ ಬಳಿಕಿ | ನ್ನೇನು ಚಿಂತಿಸಲೇಕೆ ರಕ್ಷಿಸು ನಮ್ಮನನವರತಾ |

ಎಷ್ಟು ಮಾಡಲು ಮುನ್ನ ತಾ ಪಡೆ|ದಷ್ಟು ಎಂಬುದ ಲೋಕದೊಳು ವ
ಗೆಟ್ಟ ಮಾನವರಾಡುತಿಹರಾಮಾತದಂತಿರಲೀ॥ಪಟ್ಟವಾರಿಂದಾಯ್ತು ಧ್ರುವನಿಗೆ
ಟ್ಟವರ ತಪ್ಪಿತೆ ಕುಚೇಲನಿ | ಗಿಷ್ಟಬಾಂಧವ ನೀನು ರಕ್ಷಿಸುನಮ್ಮನನವರತಾ

ತನ್ನ ದೇಹಾತುರದಲಡವಿಯೊ|ಳನ್ಯರನು ಸಂಹರಿಸುತಿರೆ । ನಿನ್ನನಾ
ಳಧಿಕವೆರಡಕ್ಷರವ ಬಣ್ಣಿಸುತಾ||ಧನ್ಯನಾದನು ಮುನಿಕುಲದಿ ಸಂ | ಪನ್ನನಾ
ನೀನೊಲಿದ ಬಳಿ | ಕಿನ್ನು ಪಾತಕವುಂಟೆ ರಕ್ಷಿಸು ನಮ್ಮನನವರತಾ

ನಿನ್ನ ಸತಿಗಳುಪಿದ ದುರಾತ್ಮನ | ಬೆನ್ನಿನಲಿ ಬಂದವನ ಕರುಣದಿ | ಮನ್ನಿಸಿದ ಕಾರಣ ದಯಾಪರಮೂರ್ತಿ ಎಂದೆನುತ || ನಿನ್ನ ಭಜಿಸಿದ ಸಾರ್ವಭೌಮರಿ | ಗಿನ್ನು ಇಹಪರವುಂಟೆ ಸದ್ಗುಣ | ರನ್ನ ಸಿರಿಸಂಪನ್ನ ರಕ್ಷಿಸು ನಮ್ಮನನವರತಾ ||೪೩||

ವೀರರಾವಣನೊಡನೆ ಹೋರಿದ | ವೀರರಗ್ಗದ ಕಪಿಗಳವರೊಳು | ಮಾರುತನ ಮಗನೇನು ಧನ್ಯನೋ ಬ್ರಹ್ಮಪಟ್ಟದಲೀ || ಸೇರಿಸಿದೆ ನಿನ್ನಂತೆ ಕೊಡುವ ಉ | ದಾರಿಯಾವನು ತ್ರಿಜಗದೊಳಗಾ | ಕಾರಣದಿ ನಂಬಿದೆನು ರಕ್ಷಿಸು ನಮ್ಮನನವರತಾ ||೪೪||

ಶಿವಶಿವಾ ನೀ ಮಾಡಿದುಪಕಾ | ರವನು ಮರೆತವರುಂಟೆ ಪಾಪದಿ | ನವೆದಜಾಮಿಳಗೊಲಿದು ಪ್ರಾಣವಿಯೋಗಕಾಲದಲೀ || ಜವನವರ ಕೈಗೊಪ್ಪಿಸದೆ ಕಾ | ಯ್ದವನು ನೀ ಮಾಧವನು ಮಿಕ್ಕಾ | ದವರಿಗುಂಟೇ ಕರುಣ ರಕ್ಷಿಸು ನಮ್ಮನನವರತಾ ||೪೫||

ಹೆತ್ತ ಮಗಳನು ಮದುವೆಯಾದವ | ನುತ್ತಮನು ಗುರುಪತ್ನಿಗಳುಪಿದ | ಚಿತ್ತಜನು ಮಾವನು ಕೃತಘ್ನನು ನಿನಗೆ ಮೈದುನನೂ || ಹೊತ್ತುತಪ್ಪಿಸಿ ಕಾಮದಲಿ ಮುನಿ | ಪೋತ್ತಮನ ಮಡದಿಯನು ನೆರದವ | [illegible]ತ್ತ ಕೈವಲ್ಯವನು ರಕ್ಷಿಸು ನಮ್ಮನನವರತಾ ||೪೬||

ಇಲ್ಲಿಹನು ಅಲ್ಲಿಲ್ಲವೆಂಬೀ | ಸೊಲ್ಲು ಸಲ್ಲದು ಹೊರಗೊಳಗೆ ನೀ | ನಿಲ್ಲದಿಲ್ಲನ್ಯತ್ರವೆಂಬುದನೆಲ್ಲ ಕೆಲ ಕೆಲರೂ || ಬಲ್ಲರಿಳೆಯೊಳು ಭಾಗವತರಾ | ದೆಲ್ಲರಿಗೆ ವಂದಿಸದ ಕುಜನರಿ | ಗೆಲ್ಲಿ ಸದ್ಗತಿ ನೋಡಿ ರಕ್ಷಿಸು ನಮ್ಮನನವರತಾ ||೪೭||

ಸಿರಿಯ ಸಂಪತ್ತಿನಲಿ ನೀ ಮೈ | ಮರೆದು ಮದಗರ್ವದಲಿ ದೀನರ | ಕರುಣದಿಂ ದೀಕ್ಷಿಸದೆ ಕಡೆಗಣ್ಣಿಂದ ನೋಡುವರೇ | ಹರಹರಾನಾಥರನು ಪಾಲಿಸಿ | ವರವಕೊಡುವ ಉದಾರಿಯೆಂಬೀ | ಬಿರುದ ಬಿಡುವರೆ ತಂದೆ ರಕ್ಷಿಸು ನಮ್ಮನನವರತಾ ||೪೮||

ದೀನ ನಾನು ಸಮಸ್ತ ಲೋಕಕೆ | ದಾನಿ ನೀನು ವಿಚಾರಿಸಲು ಮತಿ | ಹೀನ ನಾನು ಮಹಾಮಹಿಮ ಕೈವಲ್ಯಪತಿ ನೀನೂ || ಏನ ಬಲ್ಲೆನು ನಾನು ನೆರೆ ಸು | ಜ್ಞಾನಮೂರುತಿ ನೀನು ನಿನ್ನ ಸ | ಮಾನರುಂಟೇ ದೇವ ರಕ್ಷಿಸು ನಮ್ಮನನವರತಾ ||೪೯||

ತರಳತನದಲಿ ಕೆಲವು ದಿನ ದುರು | ಭರದ ಗರ್ವದಿ ಕೆಲವು ದಿನ ಮೈ | ಮರೆದು ನಿಮ್ಮಡಿಗೆರಗದಾದೆನು ವಿಷಯಕೇಳಿಯಲೀ || ನರಕ ಭಾಜನನಾಗಿ ಕಾಮಾ | ತುರದಿ ಪರಧನ ಪರಸತಿಗೆ ಮನ | ಹರಿದ ಪಾಪವ ಕಳೆದು ರಕ್ಷಿಸು ನಮ್ಮನನವರತಾ ||೫೦||

ಮರೆದೆನಭ್ಯುದಯದಲಿ ನಿಮ್ಮನು | ಮರೆಯೆನಾಪತ್ತಿನಲಿ ಹರಿಯೆಂ | ದೊ
ಯ್ಯುವೆನು ಮನವೇಕಭಾವದೊಳಿಲ್ಲನಿಮ್ಮಡಿಯ ॥ ಮರೆದು ಬಾಹಿರನಾದವನು ನಿ
ಮರೆವರೇ ಹಸು ತನ್ನಕಂದನ | ಮರೆವುದೇ ಮಮತೆಯಲಿ ರಕ್ಷಿಸು ನಮ
ನನವರತಾ ||೫

ಧಾರುಣಿಗೆ ವರಚಕ್ರವರ್ತಿಗ | ಳಾರು ಮಂದಿ ನೃಪಾಲಕರು ಹದಿ | ನಾ
ಮಂದಿಯು ಧರಣಿಯನು ಮುನ್ನಾಳ್ದನೃಪರೆನಿತೊ ॥ ವೀರರನು ಮೆಚ್ಚಿದಳೆ ಧರಣಿ
ನಾರಿ ಬಹು ಮೋಹದೊಳು ನಿನ್ನನು | ಸೇರಿ ಓಲೈಸುವಳು ರಕ್ಷಿಸು ನಮ
ನನವರತಾ ||೫

ಭಾರಕರ್ತನು ನೀನು ಬಹು ಸಂ|ಸಾರಿಯೆಂಬುದ ನಿಗಮತತಿ ಕೈ | ವಾರಿಸ
ತ್ತಿದೆ ದಿವಿಜಮನುಜಭುಜಂಗರೊಳಗಿನ್ನು||ಆರಿಗುಂಟು ಸ್ವತಂತ್ರ ನಿನ್ನಂ | ತಾ
ಮುಕ್ತಿಯನೀವ ಸದ್ಗುರು | ವಾರು ಜಗದಧ್ಯಕ್ಷ ರಕ್ಷಿಸು ನಮ್ಮನನವರತಾ ||೫

ಗತಿವಿಹೀನರಿಗಾರು ನೀನೇ | ಗತಿಕಣಾ ಪತಿಕರಿಸಿ ಕೊಡು ಸ | ದ್ಗತಿಯ ನ
ನೆಲೆ ದೇವ ನಿನಗಪರಾಧಿ ನಾನು||ಶ್ರುತಿವಚನವಾಡುವುದು ಶರಣಾ | ಗತರ ಸೇ
ಕನೆಂದು ನಿನ್ನನ್ನು | ಮತಿವಿಡಿದು ನಂಬಿದೆನು ರಕ್ಷಿಸು ನಮ್ಮನನವರತಾ ||೫

ಈಗಲೋ ಈ ದೇಹವಿನ್ನಾ|ವಾಗಲೋ ನಿಜವಿಲ್ಲವೆಂಬುದ | ನೀಗ ತಿಳಿಯ
ಮಡದಿ ಮನೆಮನೆವಾರ್ತೆಯೆಂದೆಂಬಾ || ರಾಗಲೋಭದಿ ಮುಳುಗಿ ಮುಂದಣ
ತಾಗುಬಾಳುಗರಿಯೆ ನಿನ್ನ ಸ| ಮಾಗಮವಬಯಸುವೆನು ರಕ್ಷಿಸು ನಮ
ನನವರತಾ ||೫

ಮಾಂಸರಕ್ತದ ಮಡುವಿನಲಿ ನವ । ಮಾಸ ಜನನಿಯ ಜಠರದೊಳಗಿರು|ವ
ಸಮಯದಲಿ ವೃತ್ತಿಯನು ಕಲ್ಪಿಸಿದ ಪ್ರಭುವಾರು || ನೀ ಸಲಹಿದವನಲ್ಲವೇ ಕರು
ಣಾಸಮುದ್ರನು ನೀನಿರಲು ಕಮ | ಲಾಸನನ ಹಂಗೇಕೆ ರಕ್ಷಿಸು ನಮ್ಮನನವರತಾ

ಬಲುಮೃಗದಿಮರ ಪಕ್ಷಿ ಕೀಟಕ । ಜಲಚರೌಘದಿ ಜನಿಸಿದೆನು ಕೋ | ಟ
ಗೊಳಿಸಬೇಡಕಟ ಮಾನವನಾದ ಬಳಿಕಿನ್ನು ॥ ಕೊಲಿಸದಿರು ಯಮನಿಂದ ಮು
ಹರ । ಒಲಿದು ನಿನ್ನನು ಭಜಿಸುವವರಿಗೆ | ಕೊಲೆಗೆ ಕಾರಣವೇನು ರಕ್ಷಿಸು ನಮ
ನನವರತಾ ||೫

ಪಂಚಭೂತದ ಕಾಯದೊಳು ನೀ । ವಂಚಿಸದೆ ಇರುತಿರಲು ಪೂರ್ವದ
ಸಂಚಿತದ ಫಲವೆನ್ನಲೇಕಿದು ಮರುಳುತನದಿಂದಾ || ಮಿಂಚುವವರಿನ್ನುಂಟೆ ತಿಳಿ
ಪ್ರ | ಪಂಚವೆಲ್ಲಕೆ ತಪ್ಪಿದವ ನೀ|ಕೊಂಚೆಗಾರನೆ ಕೃಷ್ಣ ರಕ್ಷಿಸು ನಮ್ಮನನವರತ

ಹಲವು ಕರ್ಮಗಳಿಂದ ಮೂತ್ರದ | ಬಿಲಗಳಲಿ ಸಂಚರಿಸಿ ಪದವಿಯ|ಫಲವು ಕಾಣದೆ ಹೊಲಬು ತಪ್ಪಿದೆನೆನ್ನ ದೇಹದಲಿ || ಒಲಿದು ನೀನಿರೆ ನಿನ್ನ ಸಲುಗೆಯ | ಬಲುಮೆಯಲಿ ಬರಸೆಳೆವೆ ಮುಕುತಿಯ | ಲಲನೆಯನ್ನು ತಳುವಿಲ್ಲ ರಕ್ಷಿಸು ನಮ್ಮನನವರತಾ || ೫೯ ||

ಎತ್ತಿದೆನು ನಾನಾಶರೀರವ | ಹೊತ್ತು ಹೊತ್ತಲಸಿದೆನು ಸಲೆ ಬೇ | ಸತ್ತು ನಿನ್ನಯ ಪದವ ಕಾಣದೆ ತೊಳಲಿ ಬಳಲಿದೆನೂ||ಸತ್ತು ಹುಟ್ಟುವ ಹುಟ್ಟಿ ಹಿಂಗುವ| ಸುತ್ತ ತೊಡಕನು ಮಾಣಿಸೆಲೆ ಪುರು | ಷೋತ್ತಮನೆ ಮನವೊಲಿದು ರಕ್ಷಿಸು ನಮ್ಮನನವರತಾ || ೬೦ ||

ಇಂದು ಈ ಜನ್ಮದಲಿ ನೀನೇ | ಬಂಧು ಹಿಂದಣ ಜನ್ಮದಲಿ ಬಳಿ | ಸಂದು ಮುಂದಣ ಜನ್ಮಕಧಿಪತಿಯಾಗಿ ಯಿರುತಿರಲೂ || ಎಂದಿಗೂ ತನಗಿಲ್ಲ || ತನು ಸಂ | ಬಂಧ ನಿನ್ನದು ಎನಗೆ ನೀ ಗತಿ | ಯೆಂದು ಬಿನ್ನೈಸಿದೆನು ರಕ್ಷಿಸು ನಮ್ಮನನವರತಾ || ೬೧ ||

ಗಣನೆಯಿಲ್ಲದ ಜನನಿಯರು ಮೊಲೆ | ಯುಣಿಸಲಾಪಯಬಿಂದುಗಳನೆದ | ನೆಣಿಸಲಳವೇ ಸಪ್ತಸಾಗರಕಧಿಕ ವೆನಿಸುವುದೂ||ಬಣಗು ಕಮಲಜನದಕೆ ತಾನೇ | ಮಣೆಯಗಾರನು ಈತ ಮಾಡಿದ | ಕುಣಿಕೆಗಳ ನೀಬಿಡಿಸಿ ರಕ್ಷಿಸು ನಮ್ಮನನವರತಾ || ೬೨ ||

ಲೇಸ ಕಾಣೆನು ಜನನ ಮರಣದಿ । ಘಾಸಿಯಾದೆನು ನೊಂದೆನಕಟಾ | ಲೇಸೆನಿಸಿ ನೋಡಲು ಪರಾಪರವಸ್ತು ನೀನಾಗೀ || ನೀ ಸಲಹುವವನಲ್ಲವೇ ಕರು | ಣಾಸಮುದ್ರನು ನೀನಿರಲು ಕಮ | ಲಾಸನನ ಹಂಗೇನು ರಕ್ಷಿಸು ನಮ್ಮನನವರತಾ || ೬೩ ||

ಕಾಪುರುಷರೈದಾರು | ಮಂದಿ ಸ | ಮೀಪದಲಿ ಕಾಡುವರು ಯೆನ್ನನು | ನೀ ಪರಾಮರಿಸದೆ ಪರಾಕಾಗಿಹುದು ಲೇಸಲ್ಲ ॥ ಶ್ರೀ ಪದಾಬ್ಜದ ಸೇವೆಯಲಿ ನೆರೆ | ಪಾಪವನು ಪರಿಹರಿಸೆ ನೀ ನಿಜ | ರೂಪಿನಲಿ ಬಂದೊಲಿದು ರಕ್ಷಿಸು ನಮ್ಮನನವರತಾ || ೬೪ ||

ಐದು ತತ್ವಗಳಾದವೊಂದ | ಕ್ಕೈದು ಕಡೆಯಲಿ ತತ್ವವಿಪ್ಪ | ತ್ತೈದು ಕೂಡಿದತನುವಿನಲಿ ವಂಚಿಸದೆ ನೀನಿರಲೂ ॥ ಭೇದಿಸದೆ ಜೀವಾತ್ಮ ತಾ ಸಂ | ಪಾದಿಸಿದ ಸಂಚಿತ ಸುಕರ್ಮವ|ನಾದರಿಸಿ ಕೈಕೊಂಡು ರಕ್ಷಿಸು ನಮ್ಮನನವರತಾ ||

ಎಂಟು ಗೇಣಿನ ದೇಹ ರೋಮಗ | ಳೆಂಟು ಕೋಟಿಯು ಕೀಳ್ಗಳರ
ತ್ತೆಂಟು ಮಾಂಸಗಳಿಂದ ಮಾಡಿದಮನೆಯುಮನವೊಲಿದು || ನೆಂಟ ನೀಸಿರ್ದ
ದೊಡೆ ಒಣ | ಹೆಂಟೆಯಲಿ ಮುಚ್ಚುವರು ದೇಹದ | ಲುಂಟೆಫಲಪುರುಷಾ
ರಕ್ಷಿಸು ನಮ್ಮನನವರತಾ || ೬

ಸ್ನಾನ ಸಂಧ್ಯಾ ಧ್ಯಾನ ಜಪತಪ | ದಾನ ಧರ್ಮ ಪರೋಪಕಾರವಿ | ಹಿ
ಕರ್ಮದೊಳುಳಿವನಲ್ಲದೆ ಬೇರೆ ಗತಿಯುಂಟೇ || ಏನು ಮಾಡಿದಡೇನು ಮುಕ್ತಿ
ಜ್ಞಾನವಿಲ್ಲದಡಿಲ್ಲ ಭಕ್ತಿಗೆ | ನೀನೆ ಕಾರಣನಾಗಿ ರಕ್ಷಿಸು ನಮ್ಮನನವರತಾ || ೬

ಕೋಪವೆಂಬುದು ತನುವಿನಲಿ ನೆರೆ | ಪಾಪ ಪಾತಕದಿಂದ ನರಕದ | ಕೂ
ದಲಿ ಮುಳುಗುವುದು ತಪ್ಪದು ಶಾಸ್ತ್ರಸಿದ್ಧವಲೆ || ರಾಪು ಮಾಡದೆ ಬಿಡ
ಯಮನು, ನಿ|ರಪರಾಧಿಯ ನೋಡಿ ಕೀರ್ತಿ ಕ|ಲಾಪವನು ನೀ ಕಾಯ್ದು ರಕ್ಷಿಸು
ಮ್ಮನನವರತಾ || ೬

ನಿನ್ನ ಸೂತ್ರದೊಳಾಡುವವು ಚೈ | ತನ್ಯ ಸಚರಾಚರಗಳೆಲ್ಲವು | ನಿನ್ನ ಸೂ
ವು ತಪ್ಪಿದರೆ ಮೊಗ್ಗುವವು ಹೂಹೆಗಳೂ || ಇನ್ನು ನಮಗೆ ಸ್ವತಂತ್ರವೆಲ್ಲಿಯು | ದ
ಕರ್ಮಸುಕರ್ಮವೆಲ್ಲವು | ನಿನ್ನದೆಂದೊಪ್ಪಿಸಿದೆ ರಕ್ಷಿಸು ನಮ್ಮನನವರತಾ || ೯

ಒಡೆಯ ನೀನೆಂದರಿತು ನಾ ನಿ | ಮ್ಮಡಿಯ ಭಜಿಸದೆ ದುರುಳನಾದೆನು
ಮಡದಿಮಕ್ಕಳ ಮೋಹದಲಿ ಮನಸಿಲುಕುತಡಿಗಡಿಗೇ || ಮಡದಿಯಾರೀ ಮಕ್ಕ
ರೀ ಒಡಲಿಗೊಡೆಯನು ನೀನು ನೀ ಕೈ | ಪಿಡಿದು ಮುದದಲಿಬಿಡದೆ ರಕ್ಷಿಸು ನ
ನನವರತಾ || ೨೦

ಪಂಟಿಸಿದ ಮದಮುಖರು ಕೆಲಕೆಲ | ರುಂಟು ರಿಪುಗಳ ಧಂಟಿಸುತ ಬ
ಕಂಟಕದಿ ಕಾಡುವರು ಕಾಯ್ವೆ ಕಲುಷಸಂಹಾರ || ಭಂಟನಲ್ಲವೇ ನಾನು ದೀನರ
ನೆಂಟನಲ್ಲವೆ ನೀನು ನಿನ್ನೊಳ | ಗುಂಟೆನಿರ್ದಯ ನೋಡಿ ರಕ್ಷಿಸು ನಮ್ಮನನವರತ
|| ೨೧

ದಂಡಧರನುಪಟಳದಿ ಮಿಗೆ ಮುಂ | ಕೊಂಡು ಮೊರೆಯೊಗುವ
ಕಾಣೆನು | ಪುಂಡರೀಕೋದ್ಭವನ ಶಿರವನು ಕಡಿದು ತುಂಡಿಸಿದ || ಖಂಡಪರಶು
ರುದ್ರಭೂಮಿಯೊ | ಳಂಡಲೆದು ತಿರುಗುವನು ನೀನು | ದ್ದಂಡ ದೇವರ ದೇ
ರಕ್ಷಿಸು ನಮ್ಮನನವರತಾ || ೨೨

ಶಕ್ತಿಯೆಂಬುದು ಮಾಯೆ ಮಾಯಾ । ಶಕ್ತಿಯದು ತನುವಿನಲಿ ನೀ ನಿಜ | ಮುಕ್ತಿದಾಯಕನಿರಲು ಸುಖದುಃಖಾದಿಗಳಿಗಾರು ॥ ಯುಕ್ತಿಯೊಳಗಿದನರಿತು ಮನದ ವಿ । ರಕ್ತಿಯಲಿ ಭಜಿಸುವಗೆ ಮುಕ್ತಿಗೆ | ಭಕ್ತಿಯೇ ಕಾರಣವು ರಕ್ಷಿಸು ನಮ್ಮನನವರತಾ ||೭೩||

ಮೂರುಗುಣ ಮೊಳೆದೋರಿತದರೊಳು । ಮೂರು ಮೂರ್ತಿಗಳಾಗಿ ರಂಜಿಸಿ| ತೋರಿ ಸೃಷ್ಟಿ ಸ್ಥಿತಿಲಯಂಗಳ ರಚಿಸಿ ವಿಲಯದಲಿ ॥ ಮೂರು ರೂಪೊಂದಾಗಿ ಪ್ರಳಯದ | ವಾರಿಯಲಿ ವಟಪತ್ರಶಯನದಿ | ಸೇರಿದವ ನೀನೀಗ ರಕ್ಷಿಸು ನಮ್ಮನನವರತಾ ||೭೪||

ನೀರಮೇಲಣ ಗುಳ್ಳೆಯಂದದಿ | ತೋರಿಯಡಗುವ ದೇಹವೀ ಸಂ | ಸಾರ ಬಹಳಾರ್ಣವದೊಳಗೆ ಮುಳುಗಿದೆನು ಪತಿಕರಿಸಿ ॥ ತೋರಿಸಚಲಾನಂದ ಪದವಿಯ| ಸೇರಿ ಸಕಟಾ ನಿನ್ನವೋಲ್ನಮ | ಗಾರು ಬಾಂಧವರುಂಟು ರಕ್ಷಿಸು ನಮ್ಮನನವರತಾ ||೭೫||

ಹೊದ್ದಿ ನಿಲುವುದೆ ದರ್ಪಣದ ಮೇ | ಲುದ್ದುರುಳಿ ಬೀಳ್ವಂತೆ ನಿಮಿಷದಿ | ಬಿದ್ದು ಹೋಗುವ ಕಾಯವೀ ತನುವೆಂಬ ಪಾಶದಲಿ ಬದ್ಧನಾದೆನು ಮಮತೆಯಲಿ ನೀ | ನಿರ್ದ್ದಯಕೆ ಫಲವೇನು ಭಕ್ತಿ ವಿ | ರುದ್ಧವಾಗದವೋಲು ರಕ್ಷಿಸು ನಮ್ಮನನವರತಾ ||೭೬||

ಕೇಳುವದು ಕಡುಕಷ್ಟ ಕಷ್ಟದ | ಬಾಳುವೆಯು ಬದುಕೇನು ಸುಡುಸುಡು | ಗಾಳಿಗೊಡ್ಡಿದ ಸೊಡರು ಈ ಸಂಸಾರದೇಳಿಗೆಯು ॥ ಬಾಳಬೇಕೆಂಬವಗೆ ನೆರೆ ನಿ | ಮ್ಮಾಳಿಗವ ಮಿಗೆ ಮಾಡಿ ಭಕ್ತಿಯೊ । ಳಾಳಿ ಬದುಕುವದುಚಿತ ರಕ್ಷಿಸು ನಮ್ಮನನವರತಾ ||೭೭||

ದೇಹಧಾರಕನಾಗಿ ಬಹುವಿಧ । ಮೋಹದೇಳಿಗೆಯಾಗಿ ಮುಕುತಿಗೆ | ಬಾಹಿರನು ತಾನಾಗಿ ವಿಷಯಾದಿಗಳಿಗೊಳಗಾಗಿ ॥ ದೇಹವೀ ಸಂಸಾರವೆನ್ನದೆ | ಮೋಹಿಸುವ ಮತಿಗೇಡಿ ಮಾನವ | ಸಾಹಸಿಯೆ ಸಟೆಮಾತು ರಕ್ಷಿಸು ನಮ್ಮನನವರತಾ||೭೮||

ಅಳಿವ ಒಡಲನು ಮೆಚ್ಚಿ ವಿಷಯಂ । ಗಳಿಗೆ ಕಾತುರನಾಗಿ ಮಿಗೆ ಕಳ | ವಳಿಸಿ ಕಾಲನ ಬಳಿಗೆ ಹಂಗಿಗನಾಗಿ ಬಾಳುವರೆ ॥ ತಿಳಿದು ಮನದೊಳು ನಿನ್ನ ನಾಮಾ | ವಳಿಯ ಜಿಹ್ವೆಗೆ ತಂದು ಪಾಪವ । ಕಳೆದ ಬದುಕೇ ಲೇಸು ರಕ್ಷಿಸು ನಮ್ಮನನವರತಾ ||೭೯||

ವರುಷ ನೂರಾಯುಷ್ಯವದರೊಳ | ಗಿರುಳು ಕಳದೈವತ್ತು ಮಿಕ್ಕಾ | ದ
ವಾರ್ಧಿಕ ಬಾಲ್ಯ ಕೌಮಾರದಲಿ ಮೂವತ್ತೂ || ಇರದೆ ಸಂದುದು ಬಳಿಕ ಇ
ತ್ತೊರುಷವದರೊಳಗಾದುದಂತಃ | ಕರುಣ ನನ್ನೊಳುತೋರಿ ರಕ್ಷಿಸು ನಮ
ವರತಾ |

ಊರು ತನಗೊಂದಿಲ್ಲ ಹೊತ್ತ ಶ | ರೀರಗಳು ಮಿತಿಯಿಲ್ಲತಾ ಸಂ | ಚಾ
ಸ್ಥಳವಿಲ್ಲ ನುಡಿಯುದ ಭಾಷೆ ಮತ್ತಿಲ್ಲ ॥ ಬೇರೆ ಹೊಸತೊಂದಿಲ್ಲ ಉಣ್ಣದ |
ವಸ್ತುಗಳಿಲ್ಲ ತನು ಸಂ|ಚಾರವೀಬಗೆಯಾಯ್ತು ರಕ್ಷಿಸು ನಮ್ಮನನವರತಾ ||

ಗೋಪುರದ ಭಾರವನು ಗಾರೆಯ|ರೂಪುದೋರಿದ ಪ್ರತಿಮೆಯುಂದದಿ|ಈ
ಯ ಸಂಸಾರಭಾರವನಾರು ತಾಳುವರೂ||ತಾ ಪರಾಕ್ರಮಿಯೆಂದು ಮನುಜನು|
ಥವನ್ನೈದುವನು ವಿಶ್ವ | ವ್ಯಾಪಕನು ನೀನಹುದು ರಕ್ಷಿಸು ನಮ್ಮನನವರತಾ||

ಬೀಜ ವೃಕ್ಷದೊಳಾಯ್ತು ವೃಕ್ಷಕ್ಕೆ | ಬೀಜವಾರಿಂದಾಯ್ತು ಲೋಕ
ಬೀಜವೃಕ್ಷನ್ಯಾಯವಿದ ಭೇದಿಸುವರಾರಿನ್ನೂ || ಸೋಜಿಗವ ನೀ ಬಲ್ಲೆ ನಿನ್ನೊ
ರಾಜಿಸುತ ವೊಳೆದೋರ್ಪುದು ಸುರ | ರಾಜನಂದನ ನಮಿತ ರಕ್ಷಿಸು ನಮ್ಮ
ವರತಾ ||

ತೊಗಲು ಬೊಂಚೆಗಳಂತೆ ನಾಲುಕು | ಬಗೆಯ ನಿರ್ಮಾಣದಲಿ ಇದರೊ
ನೆಗಳದೀ ಚೌಷಷ್ಟಿ ಲಕ್ಷಣ ಜ್ಞಾತಿ ಧರ್ಮದಲೀ | ಬಗೆಬಗೆಯ ನಾಮಾಂಕಿತದ
ವಿಗಳದೆಲ್ಲವು ನಿನ್ನ ನಾಮದಿ | ಜಗಕೆ ತೋರುತ್ತಿಹುದು ರಕ್ಷಿಸು ನಮ್ಮನ
ರತಾ ||

ಹೂಡಿದೆಲು ಮರಮುಟ್ಟು ಮಾಂಸದ|ಗೋಡೆ ಚರ್ಮದ ಹೊದಿಕೆ ನರ
ಕೂಡೆ ಹಿಂಡಿಗೆ ಬಿಗಿದ ಮನೆಯೊಳಗಾತ್ಮನೀನಿರಲೂ || ಬೀಡು ತೊಲಗಿದ
ಕಲಾ ಸುಡು | ಗಾಡಿನಲಿ ಬೆಂದುರಿವ ಕೊಂಪೆಯು | ನೋಡಿ ನಂಬಿರಬ
ರಕ್ಷಿಸು ನಮ್ಮನನವರತಾ ||

ಬೀಗ ಮುದ್ರೆಗಳಿಲ್ಲದೂರಿಗೆ | ಬಾಗಿಲುಗಳೊಂಬತ್ತು ಹೆಗಲಿರು |
ಮುಚ್ಚದೆ ತೆರೆದಿಹುದು ಜೀವಾತ್ಮ ತಾನಿರುತ || ನೀಗಿಯೆಲ್ಲವ ಬಿಸುಟು ಬೇಗ
ಹೋಗುತಿಹ ಸಮಯದಲಿ ಯಿವರವ | ರಾಗಬಲ್ಲರೆ ನೀನೆ ರಕ್ಷಿಸು ನಮ್ಮನ
ರತಾ ||

ಕೀಲಬಲಿದಿಹದ್ಯೆದು | ತಿರುಗುವ ಗಾಲಿ ಯೆರಡರ ರಥಕೆ ತ್ರೈಗುಣ | ಶೀಲನೋರ್ವನು ಸಂಚರಿಸುತಿಹನಾ ರಥಾಗ್ರದಲೀ || ಕೀಲು ಕಡೆಗೊಂದೂಡಿ ಬೀಳಲು | ಕಾಲಗತಿ ತಪ್ಪುವದು ಅದಗನು | ಕೂಲನಿನ್ನೊಳಗಿಹುದು ರಕ್ಷಿಸು ನಮ್ಮನನವರತಾ ||೮೭||

ಬಿಗಿದ ರಕುತದ ರೋಮಕೂಪದ | ತೊಗಲ ಕೋಟೆಯ ನಂಬಿ ರೋಗಾ | ವಿಗಳ ಮುತ್ತಿಗೆ ಬಲಿದು ಜೀವನಪಿಡಿಯಲನುವಾಯ್ತು || ವಿಗಡ ಯಮನಾಳು ಗಳು ಬರುತಿರೆ | ತೆಗೆಸು ಕಾಲನ ಬಲವ ಬಲು ಮು | ತ್ತಿಗೆಯನಿದ ಪರಿಹರಿಸಿ ರಕ್ಷಿಸು ನಮ್ಮನನವರತಾ ||೮೮||

ವಾರಣಗಳೆಂಟಿಸೆವ ನಗರಕೆ | ದ್ವಾರವೊಂಭತ್ತದಕೆ ಬಲು ಮೊನೆ | ಗಾರ ರಾದಾಳುಗಳ ಕಾವಲುಗಾರರನು ಮಾಡೀ ॥ ಆರರಿಯದಂತದರೊಳಗೆ ಹೃದ | ಯಾರವಿಂದದಿ ನೀನಿರಲು ಬರಿ | ದೂರುಜೀವನಿಗುಂಟೆ ರಕ್ಷಿಸು ನಮ್ಮನನ ವರತಾ ||೮೯||

ಪೇಳಲೆನ್ನಳವಲ್ಲವೈಯುವ । ನಾಳುಗಳು ವೆರೈಯಂಗದೇಶವ | ಧಾಳಿ ಮಾಡುವರಕಟಕಟ ಸೆರೆಸೂರೆಗಳ ಪಿಡಿದೂ || ಕಾಳುಮಾಡುವರಿನ್ನು ತನುವಿದು | ಬಾಳಲರಿಯದು ಕೋಟಿಯುವರಿಗೆ | ಕೋಳು ಹೋಗದನುನ್ನ ರಕ್ಷಿಸು ನಮ್ಮನನ ವರತಾ] ೯೦ ||

ನಾಲಿಗೆಯು ನಾಸಿಕವು ನಯನ ಕ | ಪಾಲ ಪದ ಪಾಣಿಗಳು ತನುವಿನ | ಮೂಲಕರ್ತೃವಿನಲ್ಲಿ ಪರಿಚಾರಕರು ತಾವಾಗೀ||ಲೀಲೆಯಿಂದಿರುತಿರ್ದು ಕಡೆಯಲಿ | ಕಾಲತೀರಿದ ಬಳಿಕಲದರನು । ಕೂಲನಿನ್ನೊಳಗಹುದು ರಕ್ಷಿಸು ನಮ್ಮನನ ವರತಾ || ೯೧ ||

ಸತ್ತವರಿಗಳಲೇಕೆ ತನ್ನನು | ಹೊತ್ತುವರು ಹೆತ್ತವರುಗಳು ತಾ | ಸತ್ತು ಹೋಗುವರಲ್ಲದುಳಿವರೆ ಮರುಗಲೇಕಿನ್ನು ॥ ಮೃತ್ಯು ಬೆನ್ನಿನೊಳಿಹುದು ತಾವಿ | ಕ್ಷಿತ್ತುಮಾಡುವದೇನು ಪೂರ್ವದ | ತೆತ್ತಿಗನು ನೀನೀಗ ರಕ್ಷಿಸು ನಮ್ಮನನ ವರತಾ || ೯೨ ||

ಮಣ್ಣು ಮಣ್ಣಿನೊಳುದಿಸಲದರಲಿ | ಮಣ್ಣು ಬೊಂಬೆಗಳಾಗಿ ರಂಜಿಸಿ | ಮ ಣ್ಣಿನಾಹಾರದಲಿ ಜೀವವ ಹೊರೆದು ಉಪಚರಿಸಿ || ಮಣ್ಣಿನಲಿ ಬಂಧಿಸಿದ ದೇಹವ | ಮಣ್ಣು ಕೂಡಿಸಬೇಡ ಜ್ಞಾನದ। ಕಣ್ಣುದೃಷ್ಟಿಯನಿತ್ತು ರಕ್ಷಿಸು ನಮ್ಮನನವರತಾ ॥

ಬೀಯುವಾಗುವ ತನುವಿನಲಿ ನಿ | ರ್ದಾಯಕನು ನೀನಿರ್ದು ಅತಿ
ದಾಯಸಂಬಡಿಸುವರೆ ನೀನನುಕೂಲವಾಗಿರ್ದು || ತಾಯನಗಲಿದ ಶಿಶುವಿನಂ
ಬಾಯಬಿಡುವಂತಾಯ್ತಲೇ ಚಿಂ । ತಾಯಕನೆ ಬಿಡಬೇಡ ರಕ್ಷಿಸು ನಮ್
ವರತಾ ||

ಮೊದಲು ಜನ್ಮವನರಿಯೆ ಮರಣದ ಹದನ ಕಡೆಯಲಿ ತಿಳಿಯೆ ನಾ
ಧ್ಯದಲಿ ನೆರೆ ನಾ ನಿಪುಣನೆಂಬುದು ಬಳಿಕ ನಗೆಗೇಡು || ಮೊದಲು ಕಡೆ ಮ
ಬಲ್ಲವ | ಮದನ ಜನಕನು ನೀನು ನಿನ್ನಯ । ಪದಯುಗವಬಯಸುವೆನು ರ
ನಮ್ಮನನವರತಾ ||

ಸಾರವಿಲ್ಲದ ದೇಹವಿದು ನಿ । ಸ್ಸಾರವಾಗಿಹ ತನುವಿನಲಿ ಸಂ | ಚಾರಿ
ನೀನೀರ್ದುಕಡೆಯಲಿ ತೊಲಗಿಹೋಗುತಲೀ || ದೂರ ತಪ್ಪಿಸಿಕೊಂಡು ಬರಿಯ
ದೂರ ಹೊರಿಸಿದ ಜೀವನಲಿ ಇದ | ನಾರು ಮೆಚ್ಚುವರಕಟ ರಕ್ಷಿಸು ನಮ
ವರತಾ ||

ಅಂಡವೆರಡುದ್ಭವಿಸಿದ ಬ್ರ | ಹ್ಮಾಂಡವದರೋಪಾದಿಯಲಿ ಪಿಂ । ಡ
ವೆಸೆದುದುಸ್ಥೂಲಕಾರಣ ಸೂಕ್ಷ್ಮತನುವಿನಲೀ | ಅಂಡ ನಿನ್ನಯ ರೋಮ
ಪದೊ | ಳಂಡಲೆದವಖಿಲಾಂಡಪಿದು ಬ್ರ | ಹ್ಮಾಂಡನಾಯಕನೀನು ರಕ್ಷಿಸು
ನನವರತಾ ||

ಒಂದು ದಿನ ತನುವಿನಲಿ ನಡೆವುದು | ಇಂದು | ಭಾಸ್ಕರಸ್ವರಗಳ
ತ್ತೊಂದುಸಾವಿರದಾರನೂರನು ಏಳು ಭಾಗದಲಿ | ಬಂದದನು ಉಡುಚಕ್ರದ
ತಂದು ಧಾರೆಯನೆರದ ಮುನಿಕುಲ । ವೃಂದಹೃದಯನುನೀನು ರಕ್ಷಿಸು
ನನವರತಾ ||

ತೊಲಗುವರು ಕಡೆಕಡೆಗೆ ತಾ ಹೊಲೆ|ಹೊಲೆಯೆನುತ ಕಳವಳಿಸಿ ಮೂ
ಬಿಲದೊಳಗೆ ಬಂದಿಹುದಕಾಣದೆಬರಿದೆಮನನೊಂದೂ ॥ ಜಲದೊಳಗೆ ಮು
ತೊಲಗದು | ಹೊಲೆಗೆಲಸವೀ ದೇಹದೊಳು ನೀ | ನೆಲೆಸಿರಲು ಹೊಲೆಯ
ರಕ್ಷಿಸು ನಮ್ಮನನವರತಾ ||

ಬರಿದೆ ಹಂಕಾರದಲಿ ತತ್ವದ|ಕುರುಹ ಕಾಣದೆ ನಿನ್ನ ದಾಸರ | ಜರೆದು
ಪುರಾಣಶಾಸ್ತ್ರಗಳನೋದಿ ಫಲವೇನು ॥ ನರರು ದುಷ್ಕರ್ಮದಲಿ ಮಾಡಿದ
ವಡಗಲು ನಿನ್ನ ನಾಮ|ಸ್ಮರಣೆಯೊಂದೇ ಸಾಕು ರಕ್ಷಿಸು ನಮ್ಮನನವರತಾ||

ಎಂಜಲೆಂಜಲು ಎಂಬರಾ ನುಡಿ | ಎಂಜಲಲ್ಲವೆ ವಾರಿ ಜಲಚರ | ದೆಂಜಲಲ್ಲವೆ ಹಾಲು ಕರುವಿನ ಎಂಜಲೆನಿಸಿರದೇ ॥ ಎಂಜಲೆಲ್ಲಿಯದೆಲ್ಲಿಯುಂ ಪರ । ರೆಂಜಲಲ್ಲದೆ ಬೇರೆ ಭಾವಿಸ | ಲೆಂಜಲುಂಟೇ ದೇವ ರಕ್ಷಿಸು ನಮ್ಮನನವರತಾ || ೧೦೧ ||

ಕೇಳುವದು ಹರಿಕಥೆಯ ಕೇಳಲು । ಹೇಳುವದು ಹರಿಭಕ್ತಿ ಮನದಲಿ | ತಾಳುವದು ಹಿರಿದಾಗಿ ನಿನ್ನಯ ಚರಣಸೇವೆಯಲೀ॥ಊಳಿಗವ ಮಾಡುವದು ವಿಷಯವ| ಹೂಳುವದು ನಿಜಮುಕ್ತಿಕಾಂತೆಯ । ನಾಳುವದು ಕೃಪೆಮಾಡಿ ರಕ್ಷಿಸು ನಮ್ಮನನವರತಾ || ೧೦೨ ||

ಈ ತೆರದೊಳಚ್ಯುತನ ನಾಮವ । ನೂತನದಿ ವಸುಧಾತಳದಿ ವಿ | ಖ್ಯಾತಿಯಲಿ ಬಣ್ಣಿಸಿದ ಕನ್ನಡ ಕುಸುಮಷಟ್ಪದಿಯ || ನೀತಿಕೋವಿದರಾಲಿಸುವರತಿ | ಪ್ರೀತಿಯಲಿ ಕೇಳ್ದರಿಗೆ ಅಸುರಾ | ರಾತಿಚೆನ್ನಿಗರಾಯ ಸುಖಗಳನೀವ ನನವರತಾ || ೧೦೩ ||

ಬಾದರಾಯಣ ಪೇಳ್ದ ಬಾರತ । ಕಾದಿಕರ್ತನುದಾರ ಶ್ರೀ ಪುರ | ದಾದಿಕೇಶವ ಮೂರ್ತಿಗಂಕಿತವಾದ ಚರಿತೆಯನೂ || ಮೇದಿನಿಯೊಳಿದನಾರು ಹೃದಯದೊ|ಳಾದರಿಸಿ ಕೇಳ್ದಪರು ಮುದದಲಿ|ಆದಿಮೂರುತಿವರಪುರಾಧಿಪನೊಲಿವನನವರತಾ ||೧೦೪||

ಕುಲಗಿರಿಗಳನ್ವಯವು ಧಾರುಣಿ | ಜಲಧಿಪಾವಕ ಮರುತ ಜಲ ನಭ | ಜಲಜಸಖ ಶೀತಾಂಶು ತಾರೆಗಳುಳ್ಳಪರಿಯಂತ ॥ ಚಲನೆಯಿಲ್ಲದೆ ನಿನ್ನ ಚರಿತೆಯು |ಒಲಿದು ಧರೆಯೊಳಗೊಪ್ಪ ವಂದದಿ|ಚೆಲುವಚೆನ್ನಿಗರಾಯ ರಕ್ಷಿಸು ನಮ್ಮನನವರತಾ||೧೦೫||

ನೂರು ಕನ್ಯಾದಾನವನು ಭಾ | ಗೀರಥೀಸ್ನಾನವನು ಮಿಗೆ ಕೈ | ಯಾರೆ ಗೋವ್ಗಳ ಪ್ರೇಮದಿಂದಲಿ ಭೂಸುರರಿಗೊಲಿದೂ||ಊರುಗಳ ನೂರಗ್ರಹಾರವ|ಧಾರೆಯೆರೆದಿತ್ತಂತೆ ಫಲ ಕೈ|ಸೇರುವುದು ಹರಿಭಕ್ತಿಸಾರದ ಕಥೆಯ ಕೇಳ್ದರಿಗೆ || ೧೦೬ ||

ಮೇರುಮಂದರ ನಿಜ ಸುವರ್ಣವ | ವಾರಿಮಧ್ಯದೊಳಿರುವ ಅವನಿಯ|ನಾರಿಯರ ಗಾಯತ್ರಿ ಪಶುಗಳನಿತ್ತ ಫಲವಹುದೂ || ಧಾರಿಣಿಯೊಳೀ ಭಕ್ತಿಸಾರವ | ನಾರು ಓದುವರವರಿಗನುದಿನ|ಚಾರುವರಗಳನಿತ್ತು ರಕ್ಷಿಪನಾದಿಕೇಶವನು ||೧೦೭||

ಲೋಕದೊಳಗತ್ಯಧಿಕನೆನಿಸುವ | ಕಾಗಿನೆಲೆಸಿರಿಯಾದಿಕೇಶವ | ತಾ ಕೃಪೆಯೊಳಗೆ ನುಡಿಸಿದನು ಈ ಭಕ್ತಿಸಾರವನೂ || ಜೋಕೆಯಲಿ ಬರೆದೋದಿ ಕೇಳ್ದರ | ನಾಕುಲದಿ ಮಾಧವನು ಕರುಣಿಪ|ಶ್ರೀ ಕಮಲವಲ್ಲಭನುಮಿಗೆ ಬಡದಾದಿಕೇಶವನೂ || ೧೦೮ ||

ಮಂಗಳಂ ಸರ್ವಾದಿಭೂತಗೆ | ಮಂಗಳಂ ಸರ್ವವನು ಪೊರೆವಗೆ | ಮಂಗಳ
ತನ್ನೊಳಗೆ ಲೋಕವ ಲಯಿಸಿಕೊಂಬವಗೆ ॥ ಮಂಗಳಂ ಸರ್ವಸ್ವತಂತ್ರಗೆ | ಮಂಗಳ
ಸತ್ಯಸ್ವರೂಪಗೆ । ಮಂಗಳಂ ಸಿರಿಗೊಡೆಯ ಚೆನ್ನಿಗರಾಯ ಕೇಶವಗೆ ॥ ೧

ಮಂಗಳಂ ಜಗದಾದಿ ಮೂರ್ತಿಗೆ। ಮಂಗಳಂ ಶ್ರುತಪುಣ್ಯ ಕೀರ್ತಿಗೆ| ಮಂಗಳ
ಕರಕಲಿತಚಕ್ರವಿದಳಿತನಕ್ರನಿಗೆ | ಮಂಗಳಂ ದ್ರೌಪದಿಯ ಪೊರೆದಗೆ | ಮಂಗ
ಧ್ರುವರಾಜಗೊಲಿದಗೆ | ಮಂಗಳಂ ಬೇಲೂರ ಚೆನ್ನಿಗರಾಯ ಕೇಶವಗೆ ॥ ೨

ಅಂತು ಪದ್ಯಗಳು ೧೧೦ಕ್ಕೆ ಮಂಗಳ ಮಸ್ತು

॥ ಶ್ರೀ ಕೃಷ್ಣಾರ್ಪಣ ಮಸ್ತು ॥

ಫಂಟಮಾರಾ

ಇಗ್ನೇಸಿಯೋ ಸಿಲೋನೆಯ ಇಟಾಲಿಯನ್ ಕಾದಂಬರಿಯ ಅನುವಾದ

ಅನುವಾದಕರು:— **ಕು. ಶಿ. ಹರಿದಾಸ ಭಟ್ಟ**, ಎಂ. ಎ.

—ಕೆಲವು ಅಭಿಪ್ರಾಯಗಳು—

"ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು"

—ಕರ್ಮವೀರ.

"ಮೂಲಗ್ರಂಥದ ವೈಶಿಷ್ಟ್ಯಗಳೆಲ್ಲ ಸಮರ್ಪಕವಾಗಿ ಕನ್ನಡಿಸಲ್ಪಟ್ಟಿರುವುದನ್ನು ನೋಡುವಾಗ ಅನುವಾದವು ಸರ್ವೋತ್ತಮವೆಂದು ಹೇಳಲು ಅಡ್ಡಿಯಿಲ್ಲ. ಅನುವಾದ ಮಾಡಿದ ಶ್ರೀ ಭಟ್ಟರೂ ಮಾಡಿಸಿದ ಪ್ರಕಾಶಕರೂ ಅಭಿನಂದನೀಯರು."

—ಇಂಡಿಯನ್ಎಕ್ಸ್‌ಪ್ರೆಸ್.

200 ಪುಟಗಳ ಈ ಕಾದಂಬರಿಯ ಬೆಲೆ ರೂ.2—0—0

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿಯ ಚಿತ್ರ)

ಬರೆದವರು: **ಕು. ಶಿ. ಹರಿದಾಸ ಭಟ್ಟ**, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.